# ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

ಓ.ಎಸ್.ನಂಃ 22 ಃ 2015

ಡಿಡಬ್ಲ್ಯೂಃ 1

ದಿನಾಂಕಃ 18.02.2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಐಆರ್‌ಪಿ ವಕೀಲರಿಂದಃ-

ನೀವು ವಾದಿಯವರಿಗೆ ಎಷ್ಟು ವರ್ಷಗಳವರೆಗೆ ದಾವಾ ಆಸ್ತಿಯಲ್ಲಿ ಸ್ವಾಧೀನ ಇರಬೇಕು ಎಂದು ನಿಗದಿಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. 4ನೇ ಪ್ರತಿವಾದಿ ಕೂಡಾ ನಮ್ಮ ಮನೆಯ ಪಕ್ಕದಲ್ಲಿ ವಾಸವಿದ್ದಾರೆ. ಆದರೆ ಮಡಿಕೇರಿಯಲ್ಲಿ ವ್ಯಾಪಾರ ಮಾಡುತ್ತಿರುವುದರಿಂದ ಆತನು ಹೋಗಿ ಬರುತ್ತಿರುತ್ತಾನೆ. 2ನೇ ಪ್ರತಿವಾದಿ ಕೂಡ ನಮ್ಮ ಮನೆಯ ಪಕ್ಕದಲ್ಲಿ ಬೇರೆ ಮನೆಯಲ್ಲಿ ವಾಸವಾಗಿರುತ್ತಾನೆ. ವಾದಿಯವರಿಗೆ ಮನೆಯನ್ನು ಬಿಟ್ಟು ಹೋಗುವಂತೆ ನೀವು ಹೇಳಿದ್ದೀರಾ ಎಂದರೆ 8 ವರ್ಷಗಳ ಹಿಂದೆ ಹೇಳಿದ್ದೇನೆ ಎಂದು ನುಡಿಯುತ್ತಾರೆ. ಮನೆಯನ್ನು ಬಿಟ್ಟು ಹೋಗುವಂತೆ ಹೇಳಿದ ಸಂದರ್ಭದಲ್ಲಿ 1ನೇ ವಾದಿ ಇರಲಿಲ್ಲ, ಆದರೆ ಅವರ ಕುಟುಂಬದವರು ಇದ್ದರು ಆ ಬಗ್ಗೆ ನೀವು ಲಿಖಿತವಾಗಿ ನೋಟಿಸನ್ನು ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಆ ಬಗ್ಗೆ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿ.

ವಾದಿಯವರು ಯಾವ ಆಸ್ತಿಯ ವಿಚಾರವಾಗಿ ದಾವೆಯನ್ನು ಹೂಡಿದ್ದಾರೆ ಎಂಬುದು ನನಗೆ ಗೊತ್ತಿರುವುದಿಲ್ಲ, ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ, ನ್ಯಾಯಾಲಯದಿಂದ ನಿಮಗೆ ನೋಟಿಸ್ ಬಂದ ನಂತರ ವಕೀಲರ ಹತ್ತಿರ ಹೋಗಿ ಕೇಸಿನ ವ್ಯವಹಾರ ನೀವೇ ನೋಡಿಕೊಂಡಿರುತ್ತೀರಿ ಎಂದರೆ ಸರಿ. ಪ್ರತಿವಾದ ಪತ್ರವನ್ನು ತಯಾರಿಸಲು ನಿಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನ್ಯಾಯಾಲಯದಿಂದ ನೋಟಿಸ್ ಬಂದ ನಂತರ ಇದಕ್ಕೆ ಪರಿಹಾರವನ್ನು ಮಾಡಿಕೊಡಿ ಎಂದು ನೋಟಿಸನ್ನು ಕೊಟ್ಟಿರುತ್ತೇನೆ

ಇದನ್ನು ಹೊರತು ಪಡಿಸಿ ದಾವಾ ಆಸ್ತಿಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ತಿಳಿಸಿರುವುದಿಲ್ಲ. ನ್ಯಾಯಾಲಯದಲ್ಲಿ ವಾದಿಯವರು ಯಾವ ದಾಖಲೆಯನ್ನು ಹಾಜರುಪಡಿಸಿದ್ದಾರೆ ಎಂಬುದು ನನಗೆ ಗೊತ್ತಿರುವುದಿಲ್ಲ.

ನ್ಯಾಯಾಲಯಕ್ಕೆ ನೀವು ಸಲ್ಲಿಸಿರುವ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದ್ದಾರೆ ಎಂಬುದು ನಿಮಗೆ ಗೊತ್ತಿದೆಯಾ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ನಿಮಗೆ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆಯಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಕುಟುಂಬದ ಹೆಸರು ಪೊಯಕಾರಂಡ ನಿಮ್ಮ ತಂದೆಯವರ ತಂದೆಯ ಹೆಸರು ಅಮ್ಮದೆ ಎಂದರೆ ಸರಿ. ಅವರು ಬಾವಲಿ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ. ಅಮ್ಮದೆ ಅವರ ಅಣ್ಣನ ಹೆಸರು ಸಾದುಲಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಕುಟುಂಬದಲ್ಲಿ ಸಾದುಲಿಯವರು ಪಟ್ಟೆದಾರರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆಲಿಯವರು ಪಟ್ಟೆದಾರರಾಗಿದ್ದರು ಎಂದರೆ ಸರಿ. ನಿಮ್ಮ ಬಾವಲಿ ಗ್ರಾಮಕ್ಕೆ ನಾಡ ಕಚೇರಿ ನಾಪೋಕ್ಲಿನಲ್ಲಿದೆ ಎಂದರೆ ಸರಿ. ನಿಮ್ಮ ತಂದೆಯವರಿಗೆ ಅಣ್ಣ ತಮ್ಮಂದಿರು ಇದ್ದರಾ ಎಂದರೆ ಅಣ್ಣ ಸಾದುಲಿ ಇದ್ದರು ಅವರು ತೀರಿ ಹೋಗಿದ್ದಾರೆ. ನಿಮ್ಮ ತಂದೆಯವರಿಗೆ ಕಾಫಿ ತೋಟ ಮತ್ತು ಇತರೆ ತರಿ ಜಮೀನುಗಳು ಇತ್ತು ಎಂದರೆ ಸರಿ. ಸದರಿ ಜಮೀನುಗಳು ನಿಮ್ಮ ತಂದೆ ಮತ್ತು ಅವರ ಅಣ್ಣ ಸಾದುಲಿ ಅವರ ಮದ್ಯ ವಿಭಾಗ ಆಗಿತ್ತ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಂದೆಯವರಿಗೆ ಎಷ್ಟು ಜಮೀನುಗಳು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿಮಗೆ ಯಾವ್ಯಾವ ಸರ್ವೇ ನಂಬರ್‌ಗಳಲ್ಲಿ ಎಷ್ಟು ಆಸ್ತಿಗಳಿವೆ ಎಷ್ಟು ಪಾಲು ಬರಬೇಕು ಎಂದರೆ ನನಗೆ ಗೊತ್ತಿಲ್ಲ. ನೀವು 4 ಜನ ಗಂಡು ಮಕ್ಕಳು 2 ಹೆಣ್ಣು ಮಕ್ಕಳು ಇದ್ದು, ನಿಮ್ಮ ಮದ್ಯೆ ಆಸ್ತಿ ವಿಭಾಗವಾಗಿದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಸ್ವಾಧೀನದಲ್ಲಿ ಎಷ್ಟು ಆಸ್ತಿ ಇದೆ ಎಂದರೆ ನನ್ನ ಸ್ವಾಧೀನದಲ್ಲಿ ಒಂದು ಮನೆ ಮಾತ್ರ ಇದೆ ಬೇರೆ ಯಾವುದೇ ಆಸ್ತಿ ನನ್ನ ಸ್ವಾಧೀನದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಅಣ್ಣ

ತಮ್ಮಂದಿರೆಲ್ಲ ಮನೆಯನ್ನು ಕಟ್ಟಿಕೊಂಡು ಸ್ವಾಧೀನದಲ್ಲಿ ಇದ್ದಾರೆ. ವಾದಿಯವರು ಸ್ವಾಧೀನದಲ್ಲಿರುವ ಮನೆಯ ಕಂದಾಯವನ್ನು ಯಾರು ಪಾವತಿ ಮಾಡುತ್ತಾರೆ ಎಂದರೆ ಅವರೇ ಪಾವತಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ವಾದಿಯವರ ಮನೆಗೆ ವಿದ್ಯುತ್ ಸಂಪರ್ಕ ಇದೆ ಎಂದರೆ ನಾನು ನೋಡಿಲ್ಲ. ಬಾವಲಿ ಗ್ರಾಮವು ಕೊಣಂಜಗೇರಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಬರುತ್ತದೆ. ಸಾಕ್ಷಿಗೆ ನಿಪಿ-28 ಛಾಯಾಚಿತ್ರವನ್ನು ತೋರಿಸಿ ಸದರಿ ಮನೆ ಯಾರಿಗೆ ಸೇರಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ ಸಾಕ್ಷಿ ಮುಂದುವರೆದು ನಿಪಿ-28 ರಲ್ಲಿರುವ ಮನೆ ವಾದಿಯವರಿಗೆ ನಾವು ಕೊಟ್ಟ ಮನೆಯಾಗಿದೆ ಎಂದು ನುಡಿಯುತ್ತಾರೆ.

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಪಿ-1 2ನೇ ಪುಟದಲ್ಲಿ ನಮ್ಮ ತಂದೆಯ ಸಹಿ ಇರುವುದಿಲ್ಲ. ನಿಪಿ-1 ರಲ್ಲಿ ಕಾಣುವ ಯಾವುದೇ ಸಹಿಯನ್ನು ಗುರುತಿಸಲು ನನ್ನಿಂದ ಸಾಧ್ಯ ಇಲ್ಲ. ನಿಮ್ಮ ತಂದೆಯವರು ಸಹಿ ಮಾಡಿರುವ ಬೇರೆ ದಾಖಲೆಗಳು ನಿಮ್ಮ ಮನೆಯಲ್ಲಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಗ್ರಾಮದ ಚಿಟ್ಟಿಯಪ್ಪ ರವರ ಪರಿಚಯ ಇದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಚಿಟ್ಟಿಯಪ್ಪ ರವರ ಮಗ ಕೆ.ಸಿ. ಅಪ್ಪಣ್ಣ ನವರ ಪರಿಚಯ ಇದೆಯಾ ಎಂದರೆ ಗೊತ್ತಿದೆ ಎಂದು ನುಡಿಯುತ್ತಾರೆ. ಅವರು ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಬಾವಲಿ ಗ್ರಾಮದ ಅಮು ಅವರ ಮಗ ಯೂಸುಫ್ ರವರ ಪರಿಚಯ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಕೆ.ಎ.ಅಹಮ್ಮದ್ ಮತ್ತು ಹೊಳಲಕೆರೆ ಮಹಮ್ಮದ್ ರವರ ಪರಿಚಯ ಇದೆಯಾ ಎಂದರೆ ಕೆ.ಎ. ಅಹಮ್ಮದ್ ರವರ ಪರಿಚಯ ಇಲ್ಲ ಆದರೆ ಹೊಳಲಕೆರೆ ಮಹಮ್ಮದ್ ರವರ ಪರಿಚಯ ಇದೆ. ಈಗ ಹೊಳಲಕೆರೆ ಮಹಮ್ಮದ್ ರವರು ತೀರಿ ಹೋಗಿದ್ದಾರೆ. ಅವರು ನಮ್ಮ ಸಂಬಂಧಿಕರಲ್ಲ. ನಾನು ಹೊಳಲಕೆರೆ ಮಹಮ್ಮದ್ ರವರನ್ನು ನೋಡಿದ್ದೇನೆ. ಅವರು ತೀರಿ ಕೊಂಡು ಎಷ್ಟು ವರ್ಷ ಆಗಿದೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ತೀರಿಹೋಗಿ ಸುಮಾರು 10 ವರ್ಷಗಳು ಆಗಿದೆ.

ನಮ್ಮ ತಾಯಿಯವರು 2 ತಿಂಗಳ ಹಿಂದೆ ತೀರಿ ಹೋಗಿರುತ್ತಾರೆ. ಅವರ ವಯಸ್ಸು ನನಗೆ ಗೊತ್ತಿರುವುದಿಲ್ಲ, ನಮ್ಮ ತಂದೆಯವರ ವಯಸ್ಸು ಗೊತ್ತಿರುವುದಿಲ್ಲ ಮತ್ತು ನನ್ನ ವಯಸ್ಸು ಗೊತ್ತಿರುವುದಿಲ್ಲ, ನನ್ನ ತಮ್ಮಂದಿರ ಮತ್ತು ತಂಗಿಯರ ವಯಸ್ಸು ಗೊತ್ತಿಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿಕೊಂಡು 1ನೇ ವಾದಿಯವರ ಗಂಡನಿಗೆ ದಿಃ 10.7.1986 ರಲ್ಲಿ ಕರಾರು ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ಸದರಿ ಆಸ್ತಿಯ ಪೂರ್ತಿ ಪ್ರತಿಫಲ 2850 ರೂ. ಗಳನ್ನು ಅದೇ ದಿವಸ ನಗದಾಗಿ ಹೊಂದಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ದಿವಸ ಕರಾರು ಪತ್ರದ ಷರತ್ತಿನ ಭಾಗಶಃ ನೆರವೇರಿಕೆ ಭಾಗವಾಗಿ ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-1ಕ್ಕೆ ನಿಮ್ಮ ತಂದೆಯವರು ಮತ್ತು ಸಾಕ್ಷಿದಾರರು ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿಯಾಗಿ ದಸ್ತಾವೇಜಿನ ಬರಹಗಾರರಾದ ಚಿಟ್ಟಿಯಪ್ಪರವರು ನಿಪಿ-1 ನ್ನು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯಲ್ಲಿ 1ನೇ ವಾದಿಯ ಗಂಡ ಮೊದಲಿಗೆ ಹುಲ್ಲಿನ ಮನೆ ನಿರ್ಮಿಸಿಕೊಂಡಿದ್ದರು ನಂತರ ಹೆಂಚಿನ ಮನೆ ನಿರ್ಮಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಗೆ ವಿದ್ಯುತ್ ಚ್ಛಕ್ತಿ ಸಂಪರ್ಕವನ್ನು ಪಡೆದುಕೊಂಡಿದ್ದಾರೆ ಮತ್ತು ಕಂದಾಯವನ್ನು ಪಾವತಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ವಾದಿಯ ಗಂಡ ದಿಃ 4.3.2011ನೇ ಇಸವಿಯಲ್ಲಿ ತೀರಿ ಕೊಂಡಿರುತ್ತಾರೆ. ಸದರಿ ಆಸ್ತಿಯಲ್ಲಿ ಈಗ 1ನೇ ವಾದಿಯವರೆ ಸ್ವಾಧೀನ ಮತ್ತು ಅನುಭದಲ್ಲಿದ್ದಾರೆ ಎಂದರೆ ಸರಿ. 4ನೇ ವಾದಿ ವೈದ್ಯರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಂದೆ ಅಬ್ದುಲ್ಲಾ ರವರು ಮತ್ತು 1ನೇ ವಾದಿಯ ಗಂಡ ಕೆ.ಎ.ಅಸೈನರ್‌ರವರು ತುಂಬಾ ಅನ್ಯೂನ್ಯವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ದಾವಾ ಆಸ್ತಿಯ ಸಂಬಂಧಿಸಿದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆಯ ಮತ್ತು ವಾದಿಯವರ ಮನೆಯ ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ನಿಮ್ಮ ಮನೆ ಇದೆ ಎಂದರೆ ಸರಿ. ಅಲ್ಲಿ ಒಂದು ರಸ್ತೆ ಇದೆ ಎಂದರೆ ಸರಿ.

ವಾದಿಯವರು ಮನೆ ಕಟ್ಟುವ ಸಂದರ್ಭದಲ್ಲಿ ನೀವು ಗಲಾಟೆ ಮಾಡಿದ್ದೀರಿ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಕಟ್ಟಿರುವ ಮನೆಯನ್ನು ವಾಪಸ್ಸು ಕೊಡಿ ಎಂದು ನಾವು ಕೇಳಿದ್ದೇವೆ. ವಾದಿಯವರು ನಿಮ್ಮ ವಿರುದ್ದ ದಿಃ 13.11.2014ನೇ ಇಸವಿಯಲ್ಲಿ ಪುಕಾರು ನೀಡಿದ್ದಾರೆ ಎಂದರೆ ಸರಿ. ಅದೇ ರೀತಿಯಾಗಿ ದಾವಾ ಆಸ್ತಿಯನ್ನು ನೋಂದಣಿ ಮಾಡಿಸಿ ಕೊಡುವಂತೆ ದಿಃ 19.3.2015 ರಲ್ಲಿ ವಕೀಲರ ಮೂಲಕ ಕಾನೂನು ತಿಳುವಳಿಕೆ ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ನಿಮ್ಮ ಅಣ್ಣ-ತಮ್ಮಂದಿರು ಮತ್ತು ಅಕ್ಕ-ತಂಗಿಯರು ಶುದ್ಧ ಕ್ರಯಪತ್ರವನ್ನು ಮಾಡಿಕೊಡಬೇಕು ಎಂದರೆ ಸರಿಯಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ

Sd/-XXX
**(ಕೋನಪ್ಪ ಎನ್.ವಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ವಿರಾಜಪೇಟೆ